FAX: 080 - 2202 8041 TEL: 080 - 2202 8032

GOVERNMENT OF KARNATAKA

# DEPARTMENT OF INFORMATION AND PUBLIC RELATIONS

VAARTHA SOUDHA, No. 17 BHAGWAN MAHAVEER ROAD, BENGALURU– 560 001.

No. DI : DD : P & N : 2015-16 : SEPTEMBER 5, 2015

## SPECIAL PRESS INVITATION

| SL No | DETAILS OF THE PROGRAMME | DATE AND TIME | VENUE OF THE PROGRAMME |
|---|---|---|---|
| 1. | INAUGURATION OF 38th PACIFIC ASIA TRAVEL ASSOCIATION TRAVEL MART<br>SHRI SIDDARAMAIAH, CHIEF MINISTER, INAUGURATES.<br>SHRI R. V. DESHPANDE, MINISTER FOR TOURISM, LARGE AND MEDIUM SCALE INDUSTRIES PRESIDES.<br>DR MAHESH SHARMA, UNION MINISTER OF STATE FOR TOURISM, CULTURE AND CIVIL AVIATION, MANY OTHER DIGNITARIES PARTICIPATE. | 06-09-2015<br>7-00 P M | HALL-3, BENGALURU INTERNATIONAL EXHIBITION CENTRE, MADANAYAKANA HALLI, TUMAKURU ROAD, BENGALURU. |

P. S. : DEPARTMENT OF TOURISM HAS MADE VEHICLE ARRANGEMENT TO FACILITATE MEDIA PERSONS TO COVER THE EVENT. THE VEHICLE WILL LEAVE AT 4-00 P M FROM KHANIJA BHAVAN PREMISES ON RACE COURSE ROAD.

CONTACT : MR ASHWIN SHETTY ON HIS MOBILE No. 99868 88887, MR CHETHAN ON HIS MOBILE No. 98445 35509 OR MR SHIVARAJ ON HIS MOBILE No. 87222 77132 FOR TRANSPORT FACILITY.

CONTACT MR DEV ON HIS MOBILE No. 98456 89954 FOR PARKING FACILITY FOR THE OUTSIDE BROADCASTING VANS OR SPOT NEWS GATHERING VEHICLES AT THE VENUE OF THE EVENT.

D. P. MURALIDHAR
DEPUTY DIRECTOR (NEWS)

ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 : ಸೆಪ್ಟೆಂಬರ್ 5, 2015

ಪತ್ರಿಕಾ ಪ್ರಕಟಣೆ

# ಅತ್ಯಾಚಾರ ನಿಯಂತ್ರಣ ತಜ್ಞರ ಸಮಿತಿಯ ಕಾರ್ಯವ್ಯಾಪ್ತಿ ತಿಳಿಸಲು ಸರ್ಕಾರಕ್ಕೆ ಪತ್ರ : ವಿ. ಎಸ್. ಉಗ್ರಪ್ಪ

ಬೆಂಗಳೂರು, ಸೆಪ್ಟೆಂಬರ್ 5 ( ಕರ್ನಾಟಕ ವಾರ್ತೆ ) :

ಅತ್ಯಾಚಾರದಂತಹ ಅತ್ಯಂತ ಸೂಕ್ಷ್ಮ ಹಾಗೂ ಗಂಭೀರ ಸ್ವರೂಪದ ಪ್ರಕರಣಗಳಲ್ಲಿ ಸಮಿತಿಯ ಅಧಿಕಾರ, ಇತಿಮಿತಿ, ಚೌಕಟ್ಟು ಹಾಗೂ ಕಾರ್ಯವ್ಯಾಪ್ತಿಯನ್ನು ಕಾನೂನುರೀತ್ಯಾ ಸ್ಪಷ್ಟೀಕರಿಸುವಂತೆ ಸರ್ಕಾರಕ್ಕೆ ಪತ್ರ ಬರೆಯಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಮೇಲಿನ ಶೋಷಣೆ, ದೌರ್ಜನ್ಯ ಮತ್ತು ಅತ್ಯಾಚಾರ ನಿಯಂತ್ರಿಸುವ ಮತ್ತು ವರದಿ ನೀಡುವ ತಜ್ಞರ ಸಮಿತಿಯ ಅಧ್ಯಕ್ಷ ಶ್ರೀ ವಿ. ಎಸ್. ಉಗ್ರಪ್ಪ ಅವರು ತಿಳಿಸಿದರು.

ಇಲ್ಲಿ ಇಂದು ನಡೆದ ಸಮಿತಿ ಸಭೆಯ ನಂತರ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು ಗಿರಿನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತಿ ಸ್ವಾಮೀಜಿ ಅವರ ವಿರುದ್ಧ ದಾಖಲಾಗಿರುವ ಎರಡನೇ ಅತ್ಯಾಚಾರ ಪ್ರಕರಣದಲ್ಲಿ, ಸಂತ್ರಸ್ತೆ ಸಮಿತಿಯನ್ನು ಸಂಪರ್ಕಿಸಿ ತನ್ನ ಅಳಲನ್ನು ತೋಡಿಕೊಂಡಾಗ, ಪ್ರಕರಣ ಕುರಿತು ಮುಂದಿನ ಹೆಜ್ಜೆ ಮುಂದಿಡುವ ಮುನ್ನ, ಸಮಿತಿಯು ಕೈಗೊಳ್ಳಬೇಕಾದ ಅಥವಾ ಕೈಗೊಳ್ಳಬಹುದಾದ ಕ್ರಮಗಳು ಕಾನೂನು ರೀತಿಯಲ್ಲಿ ಮನ್ನಣೆ ಅಥವಾ ಮಾನ್ಯತೆ ಪಡೆದಿರಬೇಕು ಎಂದು ಸಮಿತಿಯ ಸದಸ್ಯರಲ್ಲಿ ಮೂಡಿದ ಜಿಜ್ಞಾಸೆಗೆ ಪರಿಹಾರ ಕಂಡುಕೊಳ್ಳಲು ತಾವು ಸರ್ಕಾರಕ್ಕೆ ಪತ್ರ ಬರೆಯುತ್ತಿರುವುದಾಗಿ ವಿವರಿಸಿದರು.

ಓರ್ವ ವ್ಯಕ್ತಿ ತನ್ನ ಮೇಲೆ ಅತ್ಯಾಚಾರ ನಡೆದಿದೆ ಎಂದು ತಿಳಿಸಿ, ಸಮಿತಿಯ ನೆರವು ಬಯಸಿ ಬಂದಾಗ, ನೈಸರ್ಗಿಕ ನ್ಯಾಯದ ದೃಷ್ಟಿಯಲ್ಲಿ ಕೇವಲ ಆಕೆಯ ದೂರನ್ನು ಮಾತ್ರ ಆಲಿಸದೆ, ಆರೋಪಿಯ ಹೇಳಿಕೆಯನ್ನೂ ಪಡೆದು ಪರಿಶೀಲಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ತಜ್ಞರ ಈ ಸಮಿತಿಗೆ ಕಾನೂನಿನ ಬಲ ಬೇಕಾಗುತ್ತದೆ ಎಂದು ಶ್ರೀ ಉಗ್ರಪ್ಪ ಅವರು ಅಭಿಪ್ರಾಯಪಟ್ಟರು.

ಪ್ರಸ್ತುತ ಪ್ರಕರಣದಲ್ಲಿ ತನಗೆ ನ್ಯಾಯ ಒದಗಿಸಲು ನೆರವಾಗುವಂತೆ ಸಂತ್ರಸ್ತೆ ಸಮಿತಿಯನ್ನು ಸಂಪರ್ಕಿಸಿದ ಸಂದರ್ಭದಲ್ಲಿ ಒಂದೆಡೆ ಪ್ರಕರಣವು ವಿಚಾರಣಾ ಹಂತದಲ್ಲಿತ್ತು. ಮತ್ತೊಂದೆಡೆ ನ್ಯಾಯಾಲಯದ ಮೆಟ್ಟಿಲೇರಿತ್ತು. ಇಂತಹ ಸನ್ನಿವೇಶದಲ್ಲಿ ಮಧ್ಯ ಪ್ರವೇಶಿಸಲು ಸಮಿತಿಗೆ ಕಾನೂನಿನ ಚೌಕಟ್ಟಿನಲ್ಲಿ ಮನ್ನಣೆ ಇದೆಯೇ ? ಎಂಬ ಅಂಶವು ಸ್ಪಷ್ಟವಾದರೆ ಮಾತ್ರ, ಸಮಿತಿಯು ತನ್ನ ಪರಿಧಿಯಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯ. ಇಲ್ಲವಾದಲ್ಲಿ, ಇಂತಹ ಪ್ರಕರಣಗಳ ವಿಚಾರಣೆ ನಡೆದಾಗ ನ್ಯಾಯಾಲಯದಲ್ಲಿ ಸಮಿತಿಯ ನಡೆ ಮುಜುಗರವನ್ನು ಅನುಭವಿಸಬೇಕಾದೀತು ಎಂಬ ಬಹುತೇಕ ಸದಸ್ಯರ ಅಭಿಪ್ರಾಯಕ್ಕೆ ಮನ್ನಣೆ ನೀಡಿ ಪತ್ರ ಬರೆಯಲು ತೀರ್ಮಾನಿಸಲಾಗಿದೆ ಎಂದರು.

ಅತ್ಯಾಚಾರ ಪ್ರಕರಣಗಳಲ್ಲಿ ಸಂತ್ರಸ್ತೆಯನ್ನು ಬೆರಳು ಪರೀಕ್ಷೆಗೊಳಪಡಿಸಿ ಅತ್ಯಾಚಾರ ನಡೆದಿದೆಯೇ ? ಎಂದು ಖಾತರಿ ಪಡಿಸಿಕೊಳ್ಳುವ ವಿಧಾನ ಇದೆ. ಅಲ್ಲದೆ, ಈ ಪರೀಕ್ಷೆಯನ್ನು ಸಂತ್ರಸ್ತೆಯ ವಯೋಮಾನವನ್ನು ದೃಢಪಡಿಸಿ ನಿರ್ಧರಿಸಲೂ ಬಳಸುತ್ತಾರೆ ಎಂದು ಹೇಳಲಾಗುತ್ತದೆ.

ಅತ್ಯಾಚಾರಕ್ಕೆ ಒಳಗಾದ ವ್ಯಕ್ತಿ ವಿವಾಹಿತೆಯಾದರೆ ಒಂದು, ಎರಡು ಅಥವಾ ಮೂರು ಬೆರಳು ಪರೀಕ್ಷೆಯನ್ನು ನಡೆಸುವ ಅವಶ್ಯಕತೆ ಇಲ್ಲ ಎಂದು ಭಾರತದ ಸರ್ವೋಚ್ಛ ನ್ಯಾಯಾಲಯವು ತೀರ್ಪನ್ನಿತ್ತಿದ್ದರೂ, ಪ್ರಸ್ತುತ ಪ್ರಕರಣದಲ್ಲಿ ವೈದ್ಯರು ಎರಡು ಬೆರಳು ಪರೀಕ್ಷೆಯನ್ನು ನಡೆಸಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಇಂತಹ ಸನ್ನಿವೇಶಗಳಲ್ಲಿ ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು ಸಮಿತಿಯ ಅಧಿಕಾರ ಮತ್ತು ಕಾರ್ಯವ್ಯಾಪ್ತಿಯನ್ನು ಸ್ಪಷ್ಟೀಕರಿಸುವ ಅಗತ್ಯವಿದೆ ಎಂಬುದು ತಮ್ಮ ಭಾವನೆಯೂ ಆಗಿದೆ ಎಂದು ಅವರು ಹೇಳಿದರು.

ವಾರದೊಳಗೆ ವರದಿ ಸಲ್ಲಿಸಲು ಸೂಚನೆ

ರಾಘವೇಶ್ವರ ಶ್ರೀ ಎರಡನೇ ಅತ್ಯಾಚಾರ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಈವರೆಗೆ ಕೈಗೊಂಡಿರುವ ಕ್ರಮಗಳ ಕುರಿತಂತೆ ಒಂದು ವಾರದೊಳಗೆ ವರದಿ ಸಲ್ಲಿಸಲು ಸಮಿತಿಯು ಗೃಹ ಇಲಾಖೆಗೆ ಸೂಚಿಸಿದೆ ಎಂದು ಶ್ರೀ ಉಗ್ರಪ್ಪ ಅವರು ತಿಳಿಸಿದರು.

ಅಂತೆಯೇ, ಮಹಿಳಾ ಮತ್ತು ಮಕ್ಕಳ ಮೇಲಿನ ಶೋಷಣೆ, ದೌರ್ಜನ್ಯ ಮತ್ತು ಅತ್ಯಾಚಾರ ನಿಯಂತ್ರಿಸುವ ಸಮಿತಿಯ ಪ್ರಾಥಮಿಕ ವರದಿಗೆ ಸಂಬಂಧಿಸಿದಂತೆ ಸಲಹೆ ಮತ್ತು ಸೂಚನೆಗಳನ್ನು ನೀಡಲು ಸಮಿತಿಯ ಸದಸ್ಯರು ಒಂದು ವಾರ ಕಾಲಾವಕಾಶ ಕೋರಿದ್ದಾರೆ. ತದನಂತರ, ಸಮಿತಿಯ ಪ್ರಾಥಮಿಕ ವರದಿಯನ್ನು ಅಂತಿಮಗೊಳಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದೂ ಅವರು ವಿವರಿಸಿದರು.

**********

ಡಿ ಪಿ ಎಂ

ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 : ಸೆಪ್ಟೆಂಬರ್ 5, 2015

**ಪತ್ರಿಕಾ ಪ್ರಕಟಣೆ**

## ಸೆಪ್ಟೆಂಬರ್ 6 ರಂದು ನಗರದಲ್ಲಿ ನಿಮ್ಮ ತಾರೆಯರನ್ನು ತಿಳಿಯಿರಿ ನಕ್ಷತ್ರ ವೀಕ್ಷಣಾ ಕಾರ್ಯಕ್ರಮ

**ಬೆಂಗಳೂರು, ಸೆಪ್ಟೆಂಬರ್ 5 ( ಕರ್ನಾಟಕ ವಾರ್ತೆ ) :**

ಬೆಂಗಳೂರು ಅಸೋಸಿಯೇಷನ್ ಫಾರ್ ಸೈನ್ಸ್ ಎಜುಕೇಷನ್ ಸೆಪ್ಟೆಂಬರ್ 6 ರಂದು ಸಂಜೆ 6–30 ಗಂಟೆಗೆ ನಗರದ ಹೈಗ್ರೌಂಡ್ಸ್‌ನ ಟಿ. ಚೌಡಯ್ಯ ಸ್ಮಾರಕ ಭವನ ರಸ್ತೆಯಲ್ಲಿರುವ ಜವಾಹರ ಲಾಲ್ ನೆಹರೂ ತಾರಾಲಯದಲ್ಲಿ ನಿಮ್ಮ ತಾರೆಯರನ್ನು ತಿಳಿಯಿರಿ (**KNOW YOUR STARS**) ನಕ್ಷತ್ರ ವೀಕ್ಷಣಾ ಕಾರ್ಯಕ್ರಮವನ್ನು ಆಯೋಜಿಸಿದೆ.

ಹೆಚ್ಚಿನ ವಿವರಗಳಿಗಾಗಿ ತಾರಾಲಯದ ದೂರವಾಣಿ : 080 – 2237 9725 ಮತ್ತು ಅಥವಾ 080 – 2226 6084 ಸಂಪರ್ಕಿಸಬಹುದು. ಅಲ್ಲದೆ, ಅಂತರ್ಜಾಲ ತಾಣ : **http://www.taralaya.org/monthly-sky-chart.php** ವೀಕ್ಷಿಸಬಹುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

***********

ಡಿ ಪಿ ಎಂ

**ಪತ್ರಿಕಾ ಪ್ರಕಟಣೆ**

## ವಾಲ್ಮೀಕಿ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿ ಕೆ. ಎನ್. ಗಂಗಾಧರ್ ಅಧಿಕಾರ ಸ್ವೀಕಾರ

**ಬೆಂಗಳೂರು, ಸೆಪ್ಟೆಂಬರ್ 5 ( ಕರ್ನಾಟಕ ವಾರ್ತೆ ) :**

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿ ಶ್ರೀ ಕೆ. ಎನ್. ಗಂಗಾಧರ್ ಅವರು ಅಧಿಕಾರ ಸ್ವೀಕರಿಸಿದರು.

***********

ಡಿ ಪಿ ಎಂ